K-tech

ಸೈಸೆಕ್ ಕೆ-ಟೆಕ್ ಉನ್ನತಜ್ಞಾನ ಕೇಂದ್ರ ಸೈಬರ್ ಸೆಕ್ಯುರಿಟಿ ಕರ್ನಾಟಕ

CySecK Cyber Security Karnataka K-Tech CoE for Cyber Security

# ಸೈಬರ್ ವಾರ್ತಿಕ

## ನವೆಂಬರ್ 2023 ಸಂಚಿಕೆ

# CYBER VARTIKA

## NOVEMBER 2023 EDITION

### ಈ ಸಂಚಿಕೆಯಲ್ಲಿ

- ಮುನ್ನುಡಿ
- ಸಂಗ್ರಹಿಸಿದ ಸುದ್ದಿ
- ಸೈಸೆಕ್ ವರದಿ

### IN THIS ISSUE

- Foreword
- Curated News
- CySecK updates

ಸೈಬರ್ ವಾರ್ತಿಕಾವನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ದಿಪತ್ರಿಕೆಯ ಮುಕ್ತ ಚಂದಾದಾರರಾಗಿ!
*https://zcmp.in/BH6y*

If Cyber Vartika was forwarded to you by a friend, get it directly every month by SUBSCRIBING HERE!
https://zcmp.in/BH6y

CySeck CoE | CySecK | @CySecKCoE | CySeck CoE | CySecK | CySecK | CySecKCoE | @CySecK

# ಮುನ್ನುಡಿ | FOREWORD

ಅಜಿತ್ ಪದ್ಯಾನ
ಪ್ರೊಫೆಸರ್,
ಆಚಾರ್ಯ ಇನ್‌ಸ್ಟಿಟ್ಯೂಟ್



Ajith Padyana
Professor,
Acharya Institute

ನಮ್ಮ ದೇಶದ ಜನರು ದೈನಂದಿನ ಚಟುವಟಿಕೆಗಳಿಗೆ ತಂತ್ರಜ್ಞಾನವನ್ನು ಹೆಚ್ಚು ಅವಲಂಬಿಸಿರುವುದರಿಂದ, ಸೈಬರ್ ಅಪರಾಧ ಚಟುವಟಿಕೆಗಳ ಬಗ್ಗೆ ತಿಳಿದಿಲ್ಲದ ಪ್ರತಿಯೊಬ್ಬರಿಗೂ ತಂತ್ರಜ್ಞಾನವು ದೊಡ್ಡ ಸವಾಲಾಗಿ ಪರಿಣಮಿಸಿದೆ. ಸೈಬರ್ ಅಪರಾಧ, ವಂಚನೆ ವಹಿವಾಟು, ಫಿಶಿಂಗ್, ಬೆದರಿಕೆಗಳು, ರಾನ್‌ಸಮ್‌ವೇರ್, ದುರ್ಬಲತೆಗಳು ವಿಶ್ವದಾದ್ಯಂತ ಇತ್ತೀಚಿನ ಚರ್ಚೆಯ ಪದಗಳಾಗಿವೆ. ಕೃತಕ ಬುದ್ಧಿಮತ್ತೆ (AI) ಪ್ರಸ್ತುತ ಜಗತ್ತಿನಲ್ಲಿ ಹೆಚ್ಚು ಪ್ರಸ್ತುತವಾಗುತ್ತಿರುವುದರಿಂದ, ಇದರ ಸಹಾಯದಿಂದ ಸೈಬರ್ ವಂಚಕರು ನಡೆಸುತ್ತಿರುವ ವಂಚನೆಗಳು ಪ್ರಪಂಚದಾದ್ಯಂತ ಮುಗ್ದ ಜನರ ನಿದ್ದೆಗೆಡಿಸುವಂತಾಗಿದೆ.

ಸೈಬರ್ ಭದ್ರತೆಯ ಕಂಪನಿಯೊಂದರ ಪ್ರಕಾರ, 2023 ರಲ್ಲಿ, ಹೆಚ್ಚುತ್ತಿರುವ ಸೈಬರ್ ಅಪರಾಧಗಳಿಂದಾಗಿ ಅಂದಾಜು 8 ಲಕ್ಷ ಕೋಟಿ ಭಾರತೀಯ ರೂಪಾಯಿಗಳ ವೆಚ್ಚವಾಗುತ್ತಿದೆ. ಸೈಬರ್ ಭದ್ರತೆ ನಮ್ಮ ಗುರಾಣಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ನಮ್ಮ ಡೇಟಾ ಮತ್ತು ವ್ಯವಸ್ಥೆಗಳನ್ನು ಸಂಭಾವ್ಯ ಅಪಾಯಗಳಿಂದ ರಕ್ಷಿಸುತ್ತದೆ. ಮಾನವ ದೋಷವನ್ನು ಸಂಪೂರ್ಣವಾಗಿ ತೆಗೆದುಹಾಕುವುದರಿಂದ ಅನೇಕ ಸೈಬರ್ ದಾಳಿಗಳು ಸಂಭವಿಸುವುದನ್ನು ತಡೆಯಬಹುದು. ಆಧುನಿಕ ಡಿಜಿಟಲ್ ಯುಗದಲ್ಲಿ ವ್ಯಕ್ತಿಗಳು ಮತ್ತು ವ್ಯವಹಾರಗಳು ಸೈಬರ್ ಅಪರಾಧಿಗಳು ಬಯಸುವ ಅಮೂಲ್ಯವಾದ ಮಾಹಿತಿಯನ್ನು ಹೊಂದಿರುವುದರಿಂದ, ಸೈಬರ್ ಅಪರಾಧದ ಪರಿಣಾಮವು ನಮ್ಮೆಲ್ಲರನ್ನೂ ನೇರವಾಗಿ ಅಥವಾ ಪರೋಕ್ಷವಾಗಿ ಸ್ಪರ್ಶಿಸುತ್ತದೆ.

ನಮ್ಮ ಜಗತ್ತು ಹೆಚ್ಚು ಡಿಜಿಟಲ್ ಸಂಪರ್ಕಿತವಾಗುತ್ತಿದ್ದಂತೆ, ಸೈಬರ್ ಸುರಕ್ಷತೆಯ ಬಗ್ಗೆ ನಮಗೆ ಮಾಹಿತಿ & ಶಿಕ್ಷಣ ನೀಡುವುದು ಹೆಚ್ಚು ಮುಖ್ಯವಾಗುತ್ತದೆ. ಸೈಬರ್ ವಾರ್ತಿಕಾ ಸೈಬರ್ ಭದ್ರತೆ ಕುರಿತು ಜಾಗೃತಿ ಮೂಡಿಸಲು ಬದ್ಧವಾಗಿದೆ, ವೈವಿಧ್ಯಮಯ ಪ್ರೇಕ್ಷಕರಲ್ಲಿ ಜಾಗೃತಿ ಮೂಡಿಸಲು ಸೈಬರ್ ಅಪರಾಧ ಘಟನೆಗಳ ಬಗ್ಗೆ ಮಾಹಿತಿಯನ್ನು ಪ್ರಸಾರ ಮಾಡುತ್ತದೆ. ಆನ್ಲೈನ್ ಬೆದರಿಕೆಗಳ ಬಗ್ಗೆ ಅರಿವಿನ ಕೊರತೆ ಮತ್ತು ವೈಯಕ್ತಿಕ ಮಾಹಿತಿಯನ್ನು ಬಹಿರಂಗಪಡಿಸುವ ಸಂಭಾವ್ಯ ಅಪಾಯಗಳಿಂದಾಗಿ ಇಂಟರ್ನೆಟ್ ಬಳಕೆದಾರರು ಹೆಚ್ಚಾಗಿ ಸೈಬರ್ ಸುರಕ್ಷತೆಯ ಅಪಾಯಗಳಿಗೆ ಒಡ್ಡಿಕೊಳ್ಳುತ್ತಾರೆ. ದುರದೃಷ್ಟವಶಾತ್, ಎಲ್ಲಾ ಕ್ಷೇತ್ರಗಳಲ್ಲಿ ಸುಶಿಕ್ಷಿತರು ಸಹ ಫಿಶಿಂಗ್ ಚಟುವಟಿಕೆಗಳ ಹೆಚ್ಚುತ್ತಿರುವ ಅಲೆಗೆ ಸಿಲುಕಿಕೊಳ್ಳುತ್ತಿದ್ದಾರೆ, ಇದು ಹೆಚ್ಚಾಗಿ ಆರ್ಥಿಕ ಉದ್ದೇಶಗಳಿಗಾಗಿಯೇ ನಡೆಸಲ್ಪಡುತ್ತಿದೆ.

ಸುದ್ದಿಪತ್ರದ ಈ ಆವೃತ್ತಿಯು ಸೈಬರ್-ಬ್ಲಾಕ್‌ಮೇಲ್, ಬೆದರಿಕೆಗಳು, ನಕಲಿ ಆನ್ಲೈನ್ ಉದ್ಯೋಗಗಳು, ಮನೆಯಿಂದ ಕೆಲಸ ಮಾಡುವ ಉದ್ಯೋಗವಕಾಶಗಳು, ಸುಳ್ಳು ಭರವಸೆಗಳು, ಮಹಿಳೆಯರಿಗೆ ಕಿರುಕುಳ, ನಕಲಿ ವೆಬ್ಸೈಟ್ ಪೋಸ್ಟ್ ಮತ್ತು ಅಶ್ಲೀಲ ವಿಷಯವನ್ನು ಪ್ರಕಟಿಸುವುದು, ಮಾರ್ಫಿಂಗ್ ಮತ್ತು ಸುಳ್ಳು ಪ್ರೊಫೈಲ್‌ಗಳ ಸೃಷ್ಟಿಯನ್ನು ಒಳಗೊಂಡಿರುವ ಪ್ರಚಲಿತ ಆನ್ಲೈನ್ ಅಪರಾಧಗಳ ಮೇಲೆ ಕೇಂದ್ರೀಕರಿಸುತ್ತದೆ. ದುರಂತವೆಂದರೆ, ಈ ಅಪರಾಧಗಳು ಭಾರಿ ಆರ್ಥಿಕ ನಷ್ಟಕ್ಕೆ ಕಾರಣವಾಗುತ್ತವೆ. ಹೋಟೆಲ್ ಬುಕಿಂಗ್ ಹಗರಣದಲ್ಲಿ ಹಣವನ್ನು ಕಳೆದುಕೊಳ್ಳುವ ಪ್ರವಾಸಿಗರು, ತರಕಾರಿ ಮಾರಾಟಗಾರನೊಬ್ಬ ರೂ. 21 ಕೋಟಿ ಗಳನ್ನು ವಂಚಿಸುವುದು, ಸೇನಾಧಿಕಾರಿಗಳಂತೆ ನಟಿಸುವವಂಚಕರು, ನಕಲಿ ಮದುವೆ ಭರವಸೆಗಳು ಇತ್ಯಾದಿಗಳು ಇದಕ್ಕೆ ಸಾಕ್ಷಿಯಾಗಿವೆ. ಸೈಬರ್ ಜಗತ್ತಿನಲ್ಲಿ ಸಂಭಾವ್ಯ ಅಪಾಯಗಳ ಬಗ್ಗೆ ಮುಗ್ಧ ಜನರನ್ನು ಎಚ್ಚರಿಸುವ ಗುರಿಯನ್ನು ಹೊಂದಿರುವ ಈ ಸುದ್ದಿಪತ್ರವು ಅಂತಹ ಘಟನೆಗಳ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸುತ್ತದೆ.

ಸೈಬರ್ ಸುರಕ್ಷತೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸೈಬರ್ ವಾರ್ತಿಕಾ ತಂಡವು ಕೈಗೊಂಡ ಉಪಕ್ರಮವು ಸಮುದಾಯಕ್ಕೆ ಅಮೂಲ್ಯ ಮತ್ತು ಶ್ಲಾಘನೀಯವೆಂದು ಸಾಬೀತುಪಡಿಸುತ್ತದೆ.

With people increasingly relying on technology for daily activities, it's becoming a significant threat to those ignorant of cybercrime. Cybercrime, fraudulent transactions, phishing, identity threats, ransomware, and vulnerabilities are recent buzzwords globally. With Artificial Intelligence (AI) gaining relevance, human criminal intelligence poses a growing threat to innocent individuals worldwide.

Reports from a leading cybersecurity company estimate that by 2023, the world could face a staggering cost of 8 trillion dollars, or 8 lakh crores in Indian Rupees, due to escalating cybercrime. Cybersecurity acts as our fortress, shielding our data and systems from potential dangers. While eradicating human error entirely might thwart many cyberattacks, the reality is that individuals and businesses in this digital age possess valuable information coveted by cybercriminals. Consequently, the impact of cybercrime touches us all.

As our world becomes more digitally connected, educating ourselves on cybersecurity becomes increasingly important. Cyber Vartika is committed to this cause, disseminating information about cybercrime incidents to raise awareness across diverse audiences. Internet users are often exposed to cybersecurity risks due to a lack of awareness about online threats and the potential hazards of divulging personal information. Unfortunately, even highly educated individuals in all fields fall victim to the rising tide of phishing activities, often driven by financial motives.

This edition of the newsletter focuses on prevalent online crimes, including cyber-blackmail, threats, fake online jobs, work-from-home schemes, false promises, women harassment, fake website postings, publishing of explicit material, image manipulation, and the creation of false profiles. The newsletter aims to illuminate such incidents, striving to caution and inform innocent individuals about potential dangers in the cyber realm.

The Cyber Vartika team's initiative to elevate public awareness of cyber safety stands as an invaluable and commendable service to the community.

# ಪ್ರಮುಖ ಸೈಬರ್ ಸುದ್ದಿ

## ದೂರುಗಳ ಹೆಚ್ಚಳ ಹಿನ್ನೆಲೆ: ಸೈಬರ್ ಅಪರಾಧ ಸಹಾಯವಾಣಿ ಸಿಬ್ಬಂದಿ ದ್ವಿಗುಣಕ್ಕೆ ಮುಂಬೈ ಪೊಲೀಸರ ನಿರ್ಧಾರ



ಸೈಬರ್ ವಂಚನೆ ವರದಿಗಳ ಹೆಚ್ಚಳವನ್ನು ಗಮನದಲ್ಲಿಟ್ಟುಕೊಂಡು ಮುಂಬೈ ಪೊಲೀಸ್ ತಮ್ಮ ಸೈಬರ್ ಕ್ರೈಮ್ ಸಹಾಯವಾಣಿ ಕೇಂದ್ರದ ಸಿಬ್ಬಂದಿ ದ್ವಿಗುಣಗೊಳಿಸಲಾಗಿದೆ.

## ಸೈಬರ್ ವಂಚನೆ ಪ್ರಕರಣಗಳಲ್ಲಿ ಕಾಂಬೋಡಿಯಾದಲ್ಲಿ ಸಿಲುಕಿದ್ದ ಭಾರತೀಯರ ರಕ್ಷಣೆಗೆ ಮುಂದಾದ NRIFK.



ಚೀನಾದ ಸಂಸ್ಥೆಗಳಿಗೆ ಸಂಬಂಧಿಸಿದ ಸೈಬರ್ ವಂಚನೆ ಪ್ರಕರಣಗಳಲ್ಲಿ ಸಿಲುಕಿ ಕಾಂಬೋಡಿಯಾದ ಪೊಲೀಸರ ವಶದಲ್ಲಿದ್ದ ಭಾರತೀಯರನ್ನು ರಕ್ಷಿಸಲು ಅನಿವಾಸಿ ಭಾರತೀಯ ವೇದಿಕೆ, ಕರ್ನಾಟಕ (NRIFK) ಕ್ರಮ ಕೈಗೊಂಡಿದೆ. ರಕ್ಷಿಸಲ್ಪಟ್ಟವರಲ್ಲಿ ಇಬ್ಬರು ಕನ್ನಡಿಗರಿದ್ದಾರೆ ಎಂದು ತಿಳಿದುಬಂದಿದೆ.

## ಕೇಂದ್ರ ಮಾಹಿತಿ ಆಯೋಗದಿಂದ ಸೈಬರ್ ಭದ್ರತೆಯನ್ನು ಕೇಂದ್ರೀಕರಿಸಿದ ಕಾರ್ಯಾಗಾರ




ಕೇಂದ್ರ ಮಾಹಿತಿ ಆಯೋಗವು ಸೈಬರ್ ಭದ್ರತೆಯ ಬಗ್ಗೆ ಒಂದು ದಿನದ ಸೆಮಿನಾರ್ ಅನ್ನು ಆಯೋಜಿಸಲಾಗಿದ್ದು, ಇಲ್ಲಿ ಸೈಬರ್ ಬೆದರಿಕೆಗಳು, ಸರ್ಕಾರಿ ನೌಕರರಿಗೆ ಮಾರ್ಗಸೂಚಿಗಳು ಮತ್ತು ಹಣಕಾಸು ವಿಷಯಗಳಲ್ಲಿ ಸೈಬರ್ ಭದ್ರತೆಯ ಪ್ರಾಮುಖ್ಯತೆಯ ಕುರಿತು ಚರ್ಚೆ ನಡೆಸಲಾಯಿತು. ಸುಮಾರು ೧೭೦ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

## ಆನ್‌ಲೈನ್ ಉದ್ಯೋಗ ಹಗರಣಗಳಲ್ಲಿ 84% ಹೆಚ್ಚಳ: ಎಚ್ಚರಿಕೆ ವಹಿಸುವಂತೆ ಪೊಲೀಸರ ಸಲಹೆ



ಆನ್‌ಲೈನ್ ಉದ್ಯೋಗ ಹಗರಣ ಮತ್ತು ಮೋಸದ ಕರೆಗಳಿಗೆ ಸಂಬಂಧಿಸಿದ ದೂರುಗಳಲ್ಲಿ ಗಮನಾರ್ಹ ಏರಿಕೆಯಾಗಿರುವುದು ದೆಹಲಿ ಪೊಲೀಸರ ೨೦೨೩ ರ ದತ್ತಾಂಶದಲ್ಲಿ ಬಯಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಆನ್‌ಲೈನ್ ಉದ್ಯೋಗ ವಂಚನೆ ವರದಿಗಳಲ್ಲಿ ೮೪% ಹೆಚ್ಚಳವಾಗಿರುವುದು ಬಹಿರಂಗವಾಗಿದೆ.

# ಪ್ರಮುಖ ಸೈಬರ್ ಸುದ್ದಿ

## ಕ್ರಿಪ್ಟೋಕರೆನ್ಸಿ ವಂಚನೆಯ ವಿರುದ್ಧ ಕಾನೂನು ಜಾರಿಗೆ I4C ಕ್ರಮ





ಹೆಚ್ಚುತ್ತಿರುವ ಕ್ರಿಪ್ಟೋಕರೆನ್ಸಿ ಮತ್ತು ಹೂಡಿಕೆ ವಂಚನೆಯನ್ನು ಎದುರಿಸಲು ಕಾನೂನು ಜಾರಿ ಮತ್ತು ಪ್ರಾಸಿಕ್ಯೂಟರ್‌ಗಳನ್ನು ಸಾಧನಗಳೊಂದಿಗೆ ಸಜ್ಜುಗೊಳಿಸುವ ಉದ್ದೇಶದಿಂದ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರ (I4C) ಇತ್ತೀಚೆಗೆ ಜಾರ್ಖಂಡ್‌ನ ರಾಂಚಿಯಲ್ಲಿ ತರಬೇತಿಯನ್ನು ನೀಡಲಾಯಿತು.

## ಸೈಬರ್ ಅಪರಾಧಗಳನ್ನು ಭೇದಿಸಲು ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳ ಪೊಲೀಸ್ ಅಧಿಕಾರಿಗಳಿಗೆ ವಿಶೇಷ ತರಭೇತಿ.



ಕ್ರಿಪ್ಟೋಕರೆನ್ಸಿ ಸಂಬಂಧಿತ ಸೈಬರ್ ವಂಚನೆ, ಅಕ್ರಮ ಡಿಜಿಟಲ್ ಸಾಲ, ಅರೆಕಾಲಿಕ ಉದ್ಯೋಗ ಹಗರಣಗಳು ಮತ್ತು ಚೀನಾದ ಅಪ್ಲಿಕೇಶನ್ಗಳೊಂದಿಗೆ ವ್ಯವಹರಿಸುವಕುರಿತು ಜಾರ್ಖಂಡ್ ಮತ್ತು ಪಶ್ಚಿಮ  ಬಂಗಾಳದ 240 ಕ್ಕೂ ಹೆಚ್ಚು  ಹಿರಿಯ ಪೊಲೀಸ್ ಅಧಿಕಾರಿಗಳು ಎರಡು ದಿನಗಳ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಸೈಬರ್ ಅಪರಾಧ ಜಾಗೃತಿ: ಸಾರ್ವಜನಿಕರಿಗೆ ರೀಲ್ ಸ್ಪರ್ಧೆ ಆಯೋಜನೆ



ಮೀರಾ ಭಯಂದರ್ ವಸಾಯಿ ವಿರಾರ್ (MBVV) ಕಮಿಷನರೇಟ್ ನವೆಂಬರ್  30 ರವರೆಗೆ ತನ್ನ ವ್ಯಾಪ್ತಿಯಲ್ಲಿ ನಿವಾಸಿಗಳಿಗೆ ಸೈಬರ್ ರೀಲ್ ಸ್ಪರ್ಧೆಯನ್ನು  ಆಯೋಜಿಸುವ ಮೂಲಕ ಸೈಬರ್ ಅಪರಾಧಗಳನ್ನು ಎದುರಿಸುವ ಕುರಿತು ಜಾಗೃತಿ ಮೂಡಿಸಲು ಮುಂದಾಗಿದೆ. ಸ್ಪರ್ಧೆಯ ವಿಜೇತರಿಗೆ ನಗದು ಬಹುಮಾನಗಳು ಮತ್ತು ಪ್ರಶಂಸನಾ ಪ್ರಮಾಣಪತ್ರಗಳನ್ನು ನೀಡಲು ನಿರ್ಧರಿಸಲಾಗಿದ್ದು, ಅತ್ಯುತ್ತಮ ರೀಲ್ ಗಳನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ತೀರ್ಮಾನಿಸಿದೆ.

# Top Cyber News

## Mumbai Police to Double Staffing at Cyber Crime Helpline Amidst Complaint Surges



Mumbai Police has decided to bolster its cybercrime helpline staff, increasing the number of personnel from 11 to 22, addressing the surge in cyber fraud reports.

## NRIFK Rescues Indians Stranded in Cambodia Amid Rising Cyber Fraud Scams



The Non-Resident Indian Forum, Karnataka (NRIFK), took action to rescue Indians stranded in Cambodia and ensnared in cyber frauds linked to Chinese firms. It is learnt that two Kannadigas were among those rescued.

## Central Information Commission Organized a Seminar Focused on Cyber Security




The Central Information Commission held a one-day seminar on cyber security, featuring discussions on cyber threats, guidelines for government employees, and the importance of cyber security in financial matters. Approximately 170 officers and staff attended the event.

## 84% rise in online job scams: Police advise caution.



The Delhi Police data reveals a significant rise in online job scam and fraudulent call complaints in 2023, marking an 84% increase in online job fraud reports and a 52% surge in fake call complaints compared to the previous year.

# Top Cyber News

## I4C action to law enforcement against cryptocurrency fraud





The Indian Cyber Crime Coordination Centre (I4C) recently conducted intensive training in Ranchi, Jharkhand, aimed at equipping law enforcement and prosecutors with the tools to combat rising cryptocurrency and investment fraud.

## Jharkhand & West Bengal Police Engage in Specialised Cybercrime Training



Over 240 senior police officials from Jharkhand and West Bengal are partaking in a specialised two-day training program on combating cryptocurrency-related cyber fraud, illegal digital lending, part-time job scams, and dealing with Chinese apps.

## Cybercrime awareness: Reel competition organised for public.



The Mira Bhayander Vasai Virar (MBVV) Commissionerate introduces a unique approach to combat cybercrimes by hosting a cyber reel competition open to residents within its jurisdiction till November 30. The best reels will be utilized for educational purposes.

# ಆನ್‌ಲೈನ್ ಮೋಸಗಳು

## ಪುರಿ ಹೋಟೆಲ್ ಬುಕ್ಕಿಂಗ್ ಹಗರಣ: ನಕಲಿ ವೆಬ್‌ಸೈಟ್‌ಗಳಿಂದಾಗಿ ಪ್ರವಾಸಿಗರ ಜೇಬಿಗೆ ಕತ್ತರಿ



ಸೈಬರ್ ಅಪರಾಧಿಗಳು ವಿವಿಧ ಪುರಿ ಹೋಟೆಲ್‌ಗಳ ಹೆಸರಿನಲ್ಲಿ ನಕಲಿ ವೆಬ್ಸೈಟ್‌ಗಳನ್ನು ರಚಿಸುವ ಮೂಲಕ, ಪ್ರವಾಸ ಪ್ಯಾಕೇಜ್‌ಗಳು ಮತ್ತು ವಸತಿಗಳಲ್ಲಿ ಆಕರ್ಷಕ ರಿಯಾಯಿತಿಗಳೊಂದಿಗೆ ಸಂತ್ರಸ್ತರನ್ನು ಆಕರ್ಷಿಸುತ್ತಿದ್ದು, ನೂರಕ್ಕೂ ಹೆಚ್ಚು ಪ್ರವಾಸಿಗರು ಈ ವಂಚನೆಗೆ ಬಲಿಯಾಗಿರುವುದು ಭುವನೇಶ್ವರದಲ್ಲಿ ಬೆಳಕಿಗೆ ಬಂದಿದೆ.

## ವರ್ಕ್ ಫ್ರಮ್ ಹೋಮ್ ವಂಚನೆ: ತರಕಾರಿ ಮಾರಾಟಗಾರನಿಂದ ರೂ.೨೧ಕೋಟಿ ವಂಚನೆ

ಮನೆಯಿಂದ ಕೆಲಸ ಮಾಡುವ ಸೈಬರ್ ಹಗರಣವನ್ನು ಸಂಘಟಿಸಿದ್ದಕ್ಕೆ ಸಂಬಂಧಿಸಿದಂತೆ ಈ ಹಿಂದೆ ತರಕಾರಿ ಮಾರಾಟಗಾರನಾಗಿ ಕೆಲಸ ಮಾಡುತ್ತಿದ್ದ 27 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ. ಬಂಧಿತನು 10 ರಾಜ್ಯಗಳಲ್ಲಿ 37 ವಂಚನೆ ಪ್ರಕರಣಗಳಲ್ಲಿ ನೇರವಾಗಿ ಭಾಗಿಯಾಗಿರುವುದಾಗಿ ಹಾಗೂ 855 ಜನರಿಂದ ಕೇವಲ ಕಳೆದ ಆರು ತಿಂಗಳಲ್ಲಿ 21 ಕೋಟಿ ವಂಚಿಸಿರುವುದಾಗಿ ಹೇಳಲಾಗಿದೆ.

## ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಮಹಿಳೆಯರಿಂದ ರೂ.೪ ಲಕ್ಷ ಪೀಕಿದ ಸೈಬರ್ ವಂಚಕರು

ಫೇಸ್‌ಬುಕ್‌ನಲ್ಲಿ ಅಪರಿಚಿತರಿಂದ ಬಂದಂತಹ ಮೋಸದ ಪ್ರಸ್ತಾವನೆಗೆ ಮಹಿಳೆಯೊಬ್ಬರು ಬಲಿಯಾಗಿದ್ದು, ವಂಚಕರು ಮಹಿಳೆಗೆ ರೂ. 3.84 ಲಕ್ಷ ಗಳನ್ನುಹೂಡಿಕೆ ಮಾಡುವಂತೆ ಮನವೊಲಿಸಿರುವುದು ತಡವಾಗಿ ಬೆಳಕಿಗೆ ಬಂದಿದೆ. ಮತ್ತೊಂದು ಪ್ರಕರಣದಲ್ಲಿ ಮಹಿಳೆಯೊಬ್ಬರಿಗೆ ಪರಿಚಯಿಸ್ತರೆಂದುಕೊಂಡು ಕರೆಬಂದಿದ್ದು, ತನ್ನ ಪತ್ನಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ವೈದ್ಯಕೀಯ ವೆಚ್ಚಕ್ಕಾಗಿ ಹಣ ವರ್ಗಾಯಿಸುವಂತೆ ಕೇಳಲಾಗಿದ್ದು, ಮಹಿಳೆ ರೂ, 60,000 ಗಳನ್ನು ವಂಚಕರ ಖಾತೆಗೆ ವರ್ಗಾಯಿಸಿರುವುದು ಲಕ್ನೊ ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

## ಲೈಂಗಿಕ ಕಿರುಕುಳದ ಆರೋಪ: IPS ಅಧಿಕಾರಿಯಿಂದ ಸೈಬರ್ ಕ್ರೈಂ ಪ್ರಕರಣ ದಾಖಲು



ತರಬೇತಿ ಪಡೆಯುತ್ತಿರುವ ಐಪಿಎಸ್ ಅಧಿಕಾರಿಯೊಬ್ಬರಿಗೆ  ಅಪರಿಚಿತ ಸಂಖ್ಯೆಯಿಂದ ವೀಡಿಯೊ ಕರೆ ಬಂದಿದ್ದು, ಅದರಲ್ಲಿ ನಗ್ನ ಮಹಿಳೆ ಕಾಣಿಸಿಕೊಂಡಿದ್ದು, ಅದನ್ನು ತಕ್ಷಣವೇ ಸಂಪರ್ಕ ಕಡಿತಗೊಳಿಸಿದ್ದಾರೆ. ತದನಂತರ, ವಂಚಕರು ಹಣಕ್ಕಾಗಿ ಬೇಡಿಕೆಯಿಟ್ಟಿದ್ದು, ಪಾವತಿಸದಿದ್ದಲ್ಲಿ ಈ ವೀಡಿಯೋವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಬಹಿರಂಗಪಡಿಸುವುದಾಗಿ ಬೆದರಿಕೆಯೊಡ್ಡಿರುವ ಪ್ರಕರಣ ದಾಖಲಾಗಿದೆ.

## ಪ್ರತಿಷ್ಠಿತ ಕಂಪೆನಿಯಲ್ಲಿ ಉದ್ಯೋಗದ ಭರವಸೆ: ವೃತ್ತಿಪರ ಮಹಿಳೆಯೊರ್ವರಿಂದ ರೂ.೨೪ಲಕ್ಷ ಪೀಕಿದ ವಂಚಕರು



ಪುಣೆ ಮೂಲದ ಕಳೆದ ೨ ದಶಕಗಳಿಂದ ಪ್ರತಿಷ್ಠಿತ ಸಂಸ್ಥೆಯೊಂದರಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು, ಜಾಗತಿಕ ಕಾರು ತಯಾರಿಕಾ ಕಂಪೆನಿಯಲ್ಲಿ ಉನ್ನತ ಹುದ್ದೆಯ ಭರವಸೆ ನೀಡಿ ಇದಕ್ಕಾಗಿ ಮುಂಗಡವಾಗಿ ರೂ.೨೪ಲಕ್ಷಗಳನ್ನು ಪಡೆದು ವಂಚಿಸಿದ ಪ್ರಕರಣ ಪುಣೆ ಸೈಬರ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

# ಆನ್‌ಲೈನ್ ಮೋಸಗಳು

## ಹೈ ಪ್ರೊಫೈಲ್ ಹೆಸರಲ್ಲಿ ಮಹಿಳೆಯರಿಗೆ ದೋಖಾ: ಇಬ್ಬರ ಬಂಧನ

ನೌಕಾ ಅಧಿಕಾರಿಗಳು, ವೈದ್ಯರು ಮತ್ತು ಎಂಜಿನಿಯರ್‌ಗಳು ಎಂಬ ನಕಲಿ ಗುರುತುಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇಬ್ಬರು ಸೈಬರ್ ವಂಚಕರನ್ನು ಬಂಧಿಸಲಾಗಿದೆ. ಇನ್ಸ್ಟಾಗ್ರಾಮ್‌ನಲ್ಲಿ ಮದುವೆಯ ಸುಳ್ಳು ಭರವಸೆಗಳ ಮೂಲಕ ಮಹಿಳೆಯರನ್ನು ಪರಿಚಯಿಸಿಕೊಳ್ಳುತ್ತಿದ್ದ ವಂಚಕರು ಕ್ರಮೇಣ ಅವರ ಮನವೊಲಿಸಿ ವಿವಾಹವಾಗುವುದಾಗಿ ಹೇಳಿ ವಂಚಿಸುತ್ತಿದ್ದರೆಂಬುದು ತನಿಖೆಯಿಂದ ತಿಳಿದುಬಂದಿದೆ.

## ಸೈಬರ್ ವಂಚಕರಿಂದ ಪೊಲೀಸ್ ವರಿಷ್ಠಾಧಿಕಾರಿ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ: ವಂಚನೆಗೆ ಬಳಕೆ



ಬೊಕಾರೊ ಎಸ್‌ಪಿ ಹೆಸರಿನಲ್ಲಿ ನಕಲಿ ಖಾತೆ ತೆರೆದಿರುವ ಸೈಬರ್ ವಂಚಕರು, ಎಸ್‌ಪಿ ಅಧಿಕೃತ ಖಾತೆಯಿಂದ ಅವರ ಭಾವಚಿತ್ರಗಳನ್ನು ಕದ್ದು, ಅವರಂತೆಯೇ ನಟಿಸಿ ವರ್ಗಾವಣೆಯೆಂದು ಇಬ್ಬರು ವ್ಯಕ್ತಿಗಳಿಗೆ ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ಸದ್ಯ ಈ ಖಾತೆಯ ವಿರುದ್ಧ ವರದಿ ಮಾಡಲಾಗಿದ್ದು, ದೂರು ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ.

## ಆನ್ಲೈನ್ ಉದ್ಯೋಗ ವಂಚನೆ ಹಗರಣ: 21 ಜನರಿಗೆ 2.5 ವಂಚನೆ

ಆನ್ಲೈನ್ ಉದ್ಯೋಗ ವಂಚನೆಗಳು ಹೆಚ್ಚುತ್ತಿರುವ ಪ್ರವೃತ್ತಿಯ ಬಗ್ಗೆ ನಗರ ಸೈಬರ್ ಪೊಲೀಸರು ನಾಗರಿಕರಿಗೆ ಎಚ್ಚರಿಕೆ ನೀಡಿದ್ದು, ಈ ವರ್ಷವೊಂದರಲ್ಲೇ ಸುಮಾರು ರೂ.2.5 ಕೋಟಿಗಳನ್ನು ಕಳೆದುಕೊಂಡಿರುವ ೨೧ ಪ್ರಕರಣಗಳು ದಾಖಲಾಗಿವೆ. ವಂಚಕರು ಟೆಲಿಗ್ರಾಂ ನಂತಹ ಸಾಮಾಜಿಕ ಮಾಧ್ಯಮ ಪ್ಲಾಟ್ಫಾರ್ಮ್‌ಗಳನ್ನು ಬಳಸಿಕೊಂಡು ವಂಚಿಸುತ್ತಿರುವುದು ಬೆಳಕಿಗೆ ಬಂದಿದೆ.

## ವ್ಯಕ್ತಿಯೊಬ್ಬರಿಗೆ ೯೫ ಲಕ್ಷ ವಂಚನೆ: ತೈವಾನ್ ಮೂಲದ ಸೈಬರ್ ವಂಚಕನನ್ನು ಬಂಧಿಸಿದ ಸಿಐಡಿ



ಜಾರ್ಖಂಡ್‌ನ ಧನ್ಬಾದ್ ಮೂಲದ ನಿವಾಸಿಗೆ 95 ಲಕ್ಷ ರೂ.ಗಳನ್ನು ವಂಚಿಸಿದ ತೈವಾನ್ ಮೂಲದ ಸೈಬರ್ ಅಪರಾಧಿಯನ್ನು ಜಾರ್ಖಂಡ್ ಸಿಐಡಿ ಬಂಧಿಸಿದೆ. ಈ ವಂಚಕರ ಗುಂಪೊಂದು ಸಂಘಟಿತ ರೀತಿಯಲ್ಲಿ ಭಾರತದಾದ್ಯಂತ ಸಕ್ರಿಯವಾಗಿದ್ದು, ಹಲವು ಖಾತೆಗಳಿಗೆ ಹಣ ವರ್ಗಾವಣೆ ಮಾಡಲಾಗಿದ್ದು, ಬಂಧಿತರಿಂದ ರೂ.೬೭ ಲಕ್ಷಗಳನ್ನು ಸಿಐಡಿ ಪೊಲೀಸರು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

# Online Frauds

## Over 100 Tourists Lose Money in Puri Hotel Booking Scam via Fake Websites



Cyber criminals have been luring victims with attractive discounts on tour packages and accommodations by creating fake websites in the name of various Puri hotels, and more than 100 tourists have fallen prey to this fraud in Bhubaneswar.

## Work-from-home fraud: Vegetable vendor duped of Rs 21 crore.

A 27-year-old man, who was earlier working as a vegetable vendor, has been arrested in connection with organising a cyber scam of working from home. He was directly involved in 37 fraud cases across 10 states and duped 855 people of Rs 21 crore in just the last six months.

## Cyber fraudsters extort Rs 4 lakh from two women in separate cases.

One of the victims responded to a fraudulent offer on Facebook and ended up investing Rs 3.84 lakh only to realise it was a scam. In another case, the victim received a call from a fraudster posing as an acquaintance, claiming his wife was hospitalised. The scammer requested the victim's daughter to transfer money for medical expenses. The daughter, without verifying the transaction, transferred Rs 60,000 to the scammer's account.

## Trainee IPS Officer Falls Victim to Sextortion Attempt, Cyber Crime Case Filed



An IPS officer undergoing training received a video call from an unknown number in which a naked woman was seen and it was immediately disconnected. Subsequently, a case was registered against the fraudsters for demanding money and threatening to make the video public on social media if the payment was not made.

## Job promises in reputed company: Fraudsters extort Rs 24 lakh from professional woman



The victim had been working at a reputed engineering firm in Pune for two decades, he was promised a senior position at a global car manufacturer but ended up losing Rs 24 lakh between March and August of this year.

# Online Frauds

## Impostors Posing as Naval Officers on Instagram, Duping Women by fake marriage promise.

Two cyber fraudsters, who were operating under fake identities of naval officers, doctors, and engineers, have been arrested. Investigations revealed that the fraudsters, who used to introduce women through false promises of marriage on Instagram, gradually persuaded them and cheated them on the pretext of marriage.

## Cybercriminals Impersonate Bokaro SP on Facebook, Police Launch Investigation



Bokaro SP reported that cybercriminals impersonated him on Facebook, deceiving two individuals by falsely claiming a transfer and prompting them to sell their belongings. Investigations unveiled the creation of a fake account using the SP's image from his authentic Facebook account.

## Online Job Frauds Scam 21 People of Rs 2.5 Crore, Cyber Police Alert Public

City cyber police have warned citizens about a rising trend in online job frauds that have resulted in 21 people being cheated out of approximately Rs 2.5 crore this year. Fraudsters exploit social media platforms like Telegram, enticing individuals with work-from-home opportunities that seem simple, such as liking or commenting on online videos.

## CID arrests Taiwan-based cyber fraudster for duping man of Rs 95 lakh



The Jharkhand CID has arrested a Taiwanese cybercriminal for duping a resident of Dhanbad in Jharkhand of Rs 95 lakh. This gang of fraudsters is active across India in an organised manner and money has been transferred to several accounts and Rs. 67 lakh has been seized by the CID police from the arrested.

## ಚಾಮರಾಜನಗರ ಜಿಲ್ಲೆಯಲ್ಲಿ ಸೈಬರ್ ಹಾಸ್ಯ ಸಂಜೆ

- ಅಕ್ಟೋಬರ್, ಸೈಬರ್ ಭದ್ರತೆಯ ಜಾಗೃತಿ ಮಾಸಾಚರಣೆಯ ಅಂಗವಾಗಿ ಚಾಮರಾಜನಗರ ಜಿಲ್ಲೆಯಲ್ಲಿ ಸೈಬರ್ ಹಸ್ಯ ಸಂಜೆ ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾಧಿಕಾರಿಗಳಾದ ಡಾ. ಶಿಲ್ಪಾನಾಗ್ ನೆರವೇರಿಸಿದರು.






## ಕೇಂದ್ರೀಯ ವಿದ್ಯಾಲಯ, IISc, ಯಲ್ಲಿ ಸೈಬರ್ ಭದ್ರತೆಯ ಅರಿವು ಕಾರ್ಯಕ್ರಮ

- ಸೈಸೆಕ್ ನ ಕೇಂದ್ರದ ಮುಖ್ಯಸ್ಥರಾದ, ಕಾರ್ತಿಕ್ ಬಪ್ಪನಾಡ್ ಅವರು IISc ಯ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಸೈಬರ್ ಭದ್ರತೆಯ ಅರಿವು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ 50 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.





## ಪಿ.ಎಂ.ಶ್ರೀ.ಕೇಂದ್ರೀಯ ವಿದ್ಯಾಲಯ, ಹೆಬ್ಬಾಳದಲ್ಲಿ ಸೈಬರ್ ಭದ್ರತೆಯ ಅರಿವು ಕಾರ್ಯಕ್ರಮ

- ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ, ಹೆಬ್ಬಾಳದಲ್ಲಿ ೧೧ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಸೈಬರ್ ಭದ್ರತೆಯ ಅರಿವು ಕಾರ್ಯಕ್ರಮವನ್ನು ಶ್ರೀಮತಿ. ವನಜಾಕ್ಷಿ ಹಾಗೂ ಸೈಸೆಕ್‌ನ ಸ್ವಯಂಸೇವಕರಲ್ಲೊಬ್ಬರಾದ ವಿಭಾ ರವರು ನಡೆಸಿಕೊಟ್ಟರು. ೨೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.





## ಆಳ್ವಾಸ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿಯಲ್ಲಿ ಸೈಬರ್ ಭದ್ರತೆಯ ಕ್ಲಬ್ ಉದ್ಘಾಟನೆ

- ಸೈಬರ್ ಭದ್ರತೆಯ ಶಿಕ್ಷಣವನ್ನು ಉತ್ತೇಜಿಸುವಲ್ಲಿ ಮಹತ್ವದ ಹೆಜ್ಜೆಯಾಗಿ, ಆಳ್ವಾಸ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಹೆಮ್ಮೆಯಿಂದ ತನ್ನ ಸೈಬರ್ ಸೆಕ್ಯುರಿಟಿ ಕ್ಲಬ್ ಅನ್ನು ಪ್ರಾರಂಭಿಸಿತು. ಉದ್ಘಾಟನಾ ಸಮಾರಂಭದಲ್ಲಿ ಸೈಸೆಕ್ ನ ಕೇಂದ್ರದ ಮುಖ್ಯಸ್ಥರಾದ ಶ್ರೀ ಕಾರ್ತಿಕ್ ಬಪ್ಪನಾಡ್ ಅವರ ಉಪಸ್ಥಿತರಿದ್ದರು.





ಆಳ್ವಾಸ್ ಕಾಲೇಜಿನಲ್ಲಿ ಸೈಬರ್ ಸೆಕ್ಯುರಿಟಿ ಕ್ಲಬ್ ಚಟುವಟಿಕೆ ಉದ್ಘಾಟನೆ

**ವೈಯಕ್ತಿಕ ಮಾಹಿತಿಗಳ ಸುರಕ್ಷತೆ ಅತ್ಯಗತ್ಯ**

ಸಮಸ್ಯೆಗೆ ಪರಿಹಾರ

■ ವಿವೇಕ್ ಆಳ್ವ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ

## ಬಿಟಿಎಸ್ 2023: ಬೆಂಗಳೂರು ಟೆಕ್ ಶೃಂಗಸಭೆಯಲ್ಲಿ ಸೈಸೆಕ್ ಭಾಗಿ

- ನವೆಂಬರ್ 29 ರಿಂದ ಡಿಸೆಂಬರ್ 1, 2023 ರವರೆಗೆ ಬೆಂಗಳೂರು ಅರಮನೆ ಆವರಣದಲ್ಲಿ ಆಯೋಜಿಸಲಾದ ಬೆಂಗಳೂರು ಟೆಕ್ ಶೃಂಗಸಭೆ 2023 ರಲ್ಲಿ ಸೈಸೆಕ್ ಸಕ್ರಿಯವಾಗಿ ಭಾಗವಹಿಸಿತು. ಟೆಕ್ ಪರಿಸರ ವ್ಯವಸ್ಥೆಯ ಬದ್ಧತೆಗೆ ಇದು ಸಾಕ್ಷಿಯಾಯ್ತು.






## Cyber Haasya Sanje in Chamarajanagar

- In celebration of October Cybersecurity Awareness month, the Cyber Haasya Sanje event unfolded in the picturesque Chamarajanagar district. Integrated by DC, Chamarajanagar.






## Cybersecurity Awareness Session at Kendriya Vidyalaya, IISc

- Mr. Karthic Bappanad, Center Head at CySecK, spearheaded an impactful Cybersecurity Awareness session for students of Kendriya Vidyalaya, IISc. The session, attended by over 50 students.





## Cybersecurity Awareness Session at PM Sri. Kendriya Vidyalaya, Hebbal

- An enlightening awareness session unfolded at PM Sri. Kendriya Vidyalaya, Hebbal, targeting 11th Standard students. Ms. Vanajaksi, along with the dedicated contribution of our volunteer, Ms. Vibha, conducted the session. 200 students actively participated in this session.





## Inauguration of Cybersecurity Club at Alvas Institute of Engineering & Technology

- A significant stride in bolstering cybersecurity education, Alvas Institute of Engineering & Technology proudly launched its Cybersecurity Club. The inauguration ceremony was graced by the presence of Mr. Karthic Bappanad, Center Head at CySecK





ಆಳ್ವಾಸ್ ಕಾಲೇಜಿನಲ್ಲಿ ಸೈಬರ್ ಸೆಕ್ಯುರಿಟಿ ಕ್ಲಬ್ ಚಟುವಟಿಕೆ ಉದ್ಘಾಟನೆ

ವೈಯಕ್ತಿಕ ಮಾಹಿತಿಗಳ ಸುರಕ್ಷತೆ ಅತ್ಯಗತ್ಯ

ಸಮಸ್ಯೆಗೆ ಪರಿಹಾರ

## CySecK's Presence at BTS 2023: Bengaluru Tech Summit

- CySecK actively participated in the Bengaluru Tech Summit 2023, hosted at the majestic Bengaluru Palace from November 29th to December 1st, 2023. As a testament to its commitment to the tech ecosystem






# ಉಪಯುಕ್ತ ಲಿಂಕ್‌ಗಳು | Useful links

**ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ-**

- ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು **cybercrime.gov.in**
- ತಪ್ಪು ಮಾಹಿತಿ ಗುರುತಿಸಲು - **https://factcheck.ksp.gov.in**
- ಕರ್ನಾಟಕ ಸೈಬರ್ ಅಪರಾಧ ಸಹಾಯವಾಣಿ ಸಂಖ್ಯೆ 112
- ರಾಷ್ಟ್ರೀಯ ಸಹಾಯವಾಣಿ 1930 ಗೆ ಕರೆ ಮಾಡಿ

**Some useful links for staying cyber aware and cyber safe -**

- **To lodge complaint against a cyber-crime - cybercrime.gov.in**
- **To identify fake information: https://factcheck.ksp.gov.in**
- **Karnataka Cyber Crime Helpline Number 112**
- **National Helpline Number 1930**



# ನಮ್ಮ ಬಗ್ಗೆ | About CySecK

Centre of Excellence for Cyber Security

ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government’s K-tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.